ನಾಗಮಂಗಲ ತಾಲ್ಲೂಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನಾಮನಿರ್ದೇಶಕರ ನೇಮಕದ ಬಗ್ಗೆ ಸರ್ಕಾರದ ಕ್ರಮ

126(361) ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಚುನಾವಣೆ ನಡೆಸಲು ಸರ್ಕಾರ ಆದೇಶಿಸಿದ್ದು, ಚುನಾವಣೆ ಪ್ರಕ್ರಿಯೆ ಕೂಡ ನಡೆದಿದ್ದು ಈ ಹಂತದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ವಿಭಜನೆ ಮಾಡಿ ನಾಮ ನಿರ್ದೇಶಕರನ್ನು ನೇಮಕ ಮಾಡಿರುವುದರ ಔಚಿತ್ಯವೇನು;

ಆ) ನಾಗಮಂಗಲ ತಾಲ್ಲೂಕಿನಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆ ಪ್ರಾಂಗಣಕ್ಕೆ ಜಾಗ (ನಿವೇಶನ) ಖರೀದಿಸಲಾಗಿದೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ಪಾಂಡವಪುರ ತಾಲ್ಲೂಕಿಗೆ ಸ್ವತಂತ್ರ ಸಮಿತಿಯನ್ನು ಸ್ಥಾಪಿಸಬೇಕೆಂದು ಸ್ಥಳೀಯ ಸಾರ್ವಜನಿಕರು ಹಾಗೂ ರೈತರಿಂದ ಬಂದ ಮನವಿಗಳನ್ನು ಪರಿಶೀಲಿಸಿ, ನಾಗಮಂಗಲ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ ಪಾಂಡವಪುರ ತಾಲ್ಲೂಕಿಗೆ ಪ್ರತೇಕ ಸಮಿತಿಯನ್ನು ಸ್ಥಾಪಿಸಲಾಗಿದೆ. ಮಾರುಕಟ್ಟೆ ಕಾಯ್ದೆ ಪ್ರಕರಣ 10ರಲ್ಲಿನ ಅವಕಾಶದ ಮೇರೆಗೆ ನಾಗಮಂಗಲ ಹಾಗೂ ಪಾಂಡವಪುರ ಸಮಿತಿಗಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

ಆ) ಇಲ್ಲ.

ತುಂಗಾ ಮೇಲ್ದಂಡೆ ಯೋಜನೆಗೆ ಭೂಸ್ವಾಧೀನ ಪಡಿಸಿಕೊಂಡ ಭೂ ಮಾಲೀಕರಿಗೆ ಪರಿಹಾರ

127(364) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆ ಸಲುವಾಗಿ ಭೂಸ್ವಾಧೀನಪಡಿಸಿಕೊಂಡ ಭೂಮಾಲೀಕರುಗಳಿಗೆ ಪರಿಹಾರ ಧನ ನೀಡಲಾಗಿದೆಯೇ; ಎಷ್ಟು ಫಲಾನುಭವಿಗಳಿಗೆ ಪರಿಹಾರ ಧನ ನೀಡುವುದು ಬಾಕಿ ಇರುತ್ತದೆ;

ಆ) ತುಂಗಾ ಮೇಲ್ದಂಡೆ ಯೋಜನೆ ಅಣೆಕಟ್ಟು ಕಾಮಗಾರಿ ಯಾವ ಹಂತದಲ್ಲಿದೆ; ಈ ಕಾಮಗಾರಿಯ ಅಂದಾಜು ಮೊತ್ತ ಎಷ್ಟು; ಇದುವರೆಗೂ ಖರ್ಚಾದ ಮೊತ್ತ ಎಷ್ಟು; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ವಿವರ ಒದಗಿಸುವುದು;

ಇ) ತುಂಗಾ ಮೇಲ್ದಂಡೆ ಯೋಜನೆ ಸಲುವಾಗಿ ಅಗತ್ಯ ಇರುವ 400 ಹೆಕ್ಟೇರ್ ಸಂರಕ್ಷಿತ ಅರಣ್ಯವನ್ನು ಕೇಂದ್ರ ಪರಿಸರ ಇಲಾಖೆಯಿಂದ ಬಿಡುಗಡೆಗೊಳಿಸಲು ಅನುಮತಿ ದೊರೆತಿದೆಯೇ; ಶಿವಮೊಗ್ಗದಿಂದ ಹೊನ್ನಾಳಿವರೆಗಿನ ಈ ಕಾಮಗಾರಿ ಸ್ಥಗಿತಗೊಂಡಿರುವ ಕಾರಣವೇನು; ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ವಿವರ ಒದಗಿಸುವುದು;

ಈ) ತುಂಗಾ ಏತ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ತುಂಗಾ ಮೇಲ್ದಂಡೆ ಯೋಜನೆ ಸಲುವಾಗಿ ಈವರೆಗೆ ಅವಾರ್ಡ್ ಅನುಮೋದನೆಯಾದ 34 ಗ್ರಾಮಗಳ ಬಾಬ್ತು 441 ಸರ್ವೆ ನಂಬರುಗಳ ಭೂಮಾಲೀಕರುಗಳಿಗೆ ಪರಿಹಾರ ಮೊತ್ತ ಪಾವತಿಸಲಾಗಿದೆ. ಇನ್‌ಡೆಮ್‌ನಿಟಿ ಬಾಂಡ್ ಹಾಗೂ ಹಕ್ಕಿನ ದಾಖಲೆಗಳನ್ನು ಸಲ್ಲಿಸಲು ವಿಳಂಬ ಮಾಡುತ್ತಿರುವಂತಹವರ ಒಟ್ಟು 50 ಸರ್ವೆ ನಂಬರುಗಳ ಭೂಮಾಲೀಕರುಗಳಿಂದ ದಾಖಲೆಗಳನ್ನು ಪಡೆದ ನಂತರ ಪರಿಹಾರ ಮೊತ್ತವನ್ನು ಪಾವತಿಸಬೇಕಾಗಿದೆ.

ಆ) ತುಂಗಾ ಮೇಲ್ದಂಡೆ ಯೋಜನೆ ಅಣೆಕಟ್ಟು ಕಾಮಗಾರಿಯು ಶೇಕಡ 48 ರಷ್ಟು ಪೂರ್ಣಗೊಂಡಿದೆ.

ತುಂಗಾ ಮೇಲ್ದಂಡೆ ಯೋಜನೆಯ ಅಂದಾಜು ಮೊತ್ತವಾದ ರೂ. 915.35 ಕೋಟಿಯಾಗಿದ್ದು ಅಣೆಕಟ್ಟು ಕಾಮಗಾರಿಯ ಅಂದಾಜು ಮೊತ್ತ ರೂ. 74.40 ಕೋಟಿ ಇದೆ. ಜೂನ್ 2002ರ ಅಂತ್ಯದವರೆಗೆ ರೂ. 28.089 ಕೋಟಿ ಖರ್ಚಾಗಿರುತ್ತದೆ. ಅಣೆಕಟ್ಟು ಕಾಮಗಾರಿಯನ್ನು ಜೂನ್ 2003ರೊಳಗೆ ಪೂರ್ಣಗೊಳಿಸಲು ಯೋಚಿಸಿದೆ. ತುಂಗಾ ಮೇಲ್ದಂಡೆ ಯೋಜನೆಗೆ ಜೂನ್ 2002ರ ಅಂತ್ಯದವರೆಗೆ ರೂ. 194.87 ಕೋಟಿ ಖರ್ಚಾಗಿದ್ದು ಯೋಜನೆಯನ್ನು 2004ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಚಿಸಿದೆ.

ಇ) ತುಂಗಾ ಮೇಲ್ದಂಡೆ ಯೋಜನೆ ಅಡಿ ನೀರಾವರಿ ಸಲುವಾಗಿ 449.55 ಹೆ. ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸಲು ಕೋರಲಾಗಿದ್ದು, ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ಪಡೆಯುವ ಸಲುವಾಗಿ ಕೇಂದ್ರ ಸರ್ಕಾರದ ಜೊತೆ ವ್ಯವಹರಿಸಲಾಗುತ್ತಿದೆ.

ನಾಲಾ ಸರಪಳಿ 170 ಮೀ.ನಿಂದ 1950 ಮೀ.ವರೆಗೆ ಅರಣ್ಯ ಪ್ರದೇಶ ಬಿಡುಗಡೆಯಾಗದ ಕಾರಣದಿಂದಾಗಿ ನಾಲಾ ನಿರ್ಮಾಣ ಪ್ರಾರಂಭಗೊಂಡಿರುವ ಕಾಮಗಾರಿ ಮತ್ತು ಪಂಕ್ತಿ ಬದಲೀಕರಣ ಪ್ರಸ್ತಾವನೆ ಇರುವ ಕಿ.ಮೀ.60ರ ಕಾಮಗಾರಿ ಹೊರತಾಗಿ ಉಳಿದಂತೆ ಎಲ್ಲ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಈ) ತುಂಗಾ ಏತ ನೀರಾವರಿ ಯೋಜನಾ ವರದಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಒದಗಿಸಲಾಗಿದ್ದು, ಪ್ರಸಕ್ತ ಸಾಲಿಗೆ ರೂ. 5.00 ಕೋಟಿ ವಾರ್ಷಿಕ ಕಾಮಗಾರಿಗಳ ಕಾರ್ಯಕ್ರಮವಿದ್ದು ಈ ಯೋಜನೆಗೆ ಅರಣ್ಯ ಪ್ರದೇಶವನ್ನು ನೀರಾವರಿ ಕಾರ್ಯಗಳಿಗಾಗಿ ಬಿಡುಗಡೆಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಅರಣ್ಯ ಪ್ರದೇಶ ಬಿಡುಗಡೆಯಾದ ನಂತರ ಯೋಜನಾ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ತುಂಗಾ ಮೇಲ್ದಂಡೆ ಯೋಜನೆ ಕುರಿತು

128(367) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗಾಜನೂರು ಬಳಿ ತುಂಗಾ ಮೇಲ್ದಂಡೆ ಯೋಜನೆ ಸಲುವಾಗಿ ಅರಣ್ಯ ಇಲಾಖೆಗೆ ಸೇರಿದ 400 ಹೆಕ್ಟೇರ್ ಭೂಮಿಯನ್ನು ವಶಪಡಿಸಲು ಕೇಂದ್ರ ಸರ್ಕಾರದ ಪರಿಸರ